# Karnataka
# Forest Watcher

## Previous Year Paper
### 24 Jan, 2016

ಪರೀಕ್ಷಾ ಮೇಲ್ವಿಚಾರಕರು ನಿರ್ದೇಶನ ನೀಡಿದ ನಂತರವೇ ಪ್ರಶ್ನೆ ಪತ್ರಿಕೆಯ ಪುಸ್ತಕವನ್ನು ತೆರೆಯತಕ್ಕದ್ದು.

ಗರಿಷ್ಠ ಅಂಕಗಳು : **50**

ಒಟ್ಟು ಪ್ರಶ್ನೆಗಳು : **50**

ಗರಿಷ್ಠ ಸಮಯ : **1 ಗಂಟೆ**

| ಅಭ್ಯರ್ಥಿಗಳು ಓ.ಎಂ.ಆರ್. ಕ್ರಮಾಂಕವನ್ನು ಈ ಅಂಕಣದಲ್ಲಿ ಬರೆಯತಕ್ಕದ್ದು | ಅಭ್ಯರ್ಥಿಗಳು ತಮ್ಮ ರಿಜಿಸ್ಟರ್ ನಂಬರ್‌ನ್ನು ಈ ಅಂಕಣದಲ್ಲಿ ಬರೆಯತಕ್ಕದ್ದು | ಪ್ರಶ್ನೆ ಪತ್ರಿಕೆಯ ಶ್ರೇಣಿ ಸಂಕೇತ |
|---|---|---|
| | | |

| | |
|---|---|
| ಅಭ್ಯರ್ಥಿಯ ಸಹಿ | ಪರಿವೀಕ್ಷಕರ ಸಹಿ |

## ಬಹುಮುಖ್ಯ ಸೂಚನೆಗಳು

**ಪರೀಕ್ಷೆಯ ಸಮಯದಲ್ಲಿ ಮೊಬೈಲ್ ಫೋನ್ ಮತ್ತು ಕ್ಯಾಲ್ಕುಲೇಟರ್‌ಗಳನ್ನು ತರಬಾರದು. ನೀವು ಇವುಗಳನ್ನು ಪರೀಕ್ಷಾ ಕೊಠಡಿಯೊಳಗೆ ತಂದಲ್ಲಿ ನಿಮ್ಮ ಅಭ್ಯರ್ಥಿತನವನ್ನು ಕಳೆದುಕೊಳ್ಳುತ್ತೀರಿ.**

1. ಓ.ಎಂ.ಆರ್. ಹಾಳೆಯಲ್ಲಿ ಬರೆಯಲು ಮತ್ತು ಉತ್ತರಗಳನ್ನು ಗುರುತಿಸಲು **ಕಡ್ಡಾಯವಾಗಿ** ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪೆನ್ನನ್ನು ಉಪಯೋಗಿಸಿ.
2. ಎಲ್ಲಾ **50** ಪ್ರಶ್ನೆಗಳು ಕಡ್ಡಾಯ ಮತ್ತು ಸಮಾನ ಅಂಕಗಳನ್ನು ಹೊಂದಿರುತ್ತವೆ.
3. ಪ್ರಶ್ನೆ ಪತ್ರಿಕೆಯನ್ನು ತೆರೆಯುವ ಮೊದಲು ಅದರ ಜೊತೆಯಲ್ಲಿರುವ ಓ.ಎಂ.ಆರ್. ಉತ್ತರ ಹಾಳೆಯನ್ನು ಸುರಕ್ಷಿತವಾಗಿ ಹೊರಗಡೆ ತೆಗೆಯುವುದು. ಓ.ಎಂ.ಆರ್. ಉತ್ತರ ಹಾಳೆಯ ನಿಗದಿತ ಸ್ಥಳದಲ್ಲಿ ನಿಮ್ಮ ಹೆಸರು, ನೋಂದಣಿ ಸಂಖ್ಯೆ ಮತ್ತು ಪ್ರಶ್ನೆ ಪತ್ರಿಕೆಯ ಶ್ರೇಣಿಯನ್ನು ನಿಗದಿಪಡಿಸಿದ ಕಲಂಗಳಲ್ಲಿ ಭರ್ತಿ ಮಾಡುವುದು ಹಾಗೂ ಓ.ಎಂ.ಆರ್. ಉತ್ತರ ಹಾಳೆಯ ನಿಗದಿತ ಅಂಕಣದಲ್ಲಿ ಪರೀಕ್ಷಾ ಮೇಲ್ವಿಚಾರಕರ ಸಹಿ ಮಾಡಿಸುವುದು.
4. ಪ್ರತೀ ಪ್ರಶ್ನೆಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಇವುಗಳಲ್ಲಿ ಒಂದು ಮಾತ್ರ ಪರಿಪೂರ್ಣ ಮತ್ತು ಸರಿಯಾದುದು. ಯಾವ ಉತ್ತರ ಪರಿಪೂರ್ಣ ಮತ್ತು ಸರಿ ಎಂದು ನೀವು ಭಾವಿಸುತ್ತೀರೋ ಅದನ್ನು ಓ.ಎಂ.ಆರ್. ಹಾಳೆಯಲ್ಲಿನ ಉತ್ತರದ ವೃತ್ತವನ್ನು ಸಂಪೂರ್ಣವಾಗಿ ಗುರುತು ಮಾಡುವ ಮೂಲಕ ದಾಖಲಿಸಿ.
5. **ನಕಾರಾತ್ಮಕ ಅಂಕಗಳಿರುವುದಿಲ್ಲ. ಆದರೆ, ನೀವು ಒಂದಕ್ಕಿಂತ ಹೆಚ್ಚು ಉತ್ತರವನ್ನು ಒಂದು ಪ್ರಶ್ನೆಗೆ ನೀಡಿದರೆ, ಇವುಗಳನ್ನು ಮೌಲ್ಯಮಾಪನ ಮಾಡುವಾಗ ತಪ್ಪು ಆಯ್ಕೆ ಎಂದು ಪರಿಗಣಿಸಿ, ಆ ಪ್ರಶ್ನೆಗೆ ಶೂನ್ಯ ಅಂಕವನ್ನು ನೀಡಲಾಗುವುದು. ಆದ್ದರಿಂದ, ಒಂದೇ ಉತ್ತರವನ್ನು ಗುರುತಿಸಿ.**
6. ಒಂದೊಮ್ಮೆ ನೀವು ಗುರುತಿಸಿದ ಉತ್ತರವು ತಜ್ಞ ಸಮಿತಿಯು ನಿರ್ಧರಿಸಿದ ಸರಿಯಾದ ಉತ್ತರಕ್ಕೆ ಹೊಂದಿಕೆಯಾಗುವುದಾದರೆ ಪೂರ್ಣ ಅಂಕಗಳನ್ನು ನಿಮಗೆ ನೀಡಲಾಗುವುದು.
7. ಓ.ಎಂ.ಆರ್. ಉತ್ತರ ಹಾಳೆಯನ್ನು ಮಡಚುವುದಾಗಲಿ, ಹರಿಯುವುದಾಗಲಿ, ಕೊಳೆ ಮಾಡುವುದಾಗಲಿ ಮಾಡಬಾರದು. ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಅಸಭ್ಯ ರೀತಿಯ ಗುರುತು ಮಾಡಬಾರದು.
8. ಪ್ರಶ್ನೆ ಪತ್ರಿಕೆಯ ಹಿಂದಿನ ಪುಟದ ಖಾಲಿ ಜಾಗವನ್ನು ನಿಮ್ಮ ಕರಡು ಕೆಲಸಕ್ಕೆ ಉಪಯೋಗಿಸಬಹುದು.
9. ಮುಂದುವರೆಯಿರಿ. ನಿಮಗೆ ಶುಭವಾಗಲಿ.

*

[ಪು.ತಿ.ನೋ.

**ಕರ್ನಾಟಕ ಅರಣ್ಯ ಇಲಾಖೆ**

**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಹಾಗೂ ಆಯ್ಕೆ ಪ್ರಾಧಿಕಾರ ಇವರ ಕಚೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು–560003**

**ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿ**

**ಅಧಿಸೂಚನೆ ಸಂಖ್ಯೆ: ಬಿ9–ಅವೀ–ನೇಮಕಾತಿ–ವಿವ–5/2012–13 ದಿನಾಂಕ 18–03–2013**
**ಮತ್ತು ದಿನಾಂಕ 07–05–2015.**
**ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಮುಂದುವರಿದ ಪ್ರಕಟಣೆ.**

## ಪ್ರಕಟಣೆ

248 ಅರಣ್ಯ ವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆ ಕುರಿತು ದಿನಾಂಕ 24–01–2016 ರಂದು ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸಲಾಗಿತ್ತು. ಲಿಖಿತ ಪರೀಕ್ಷೆಯ ಕೀ ಉತ್ತರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಉತ್ತರಗಳಿಗೆ ಅಭ್ಯರ್ಥಿಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಅಂಚೆ ಮೂಲಕ ಈ ಕೆಳಕಂಡ ವಿಳಾಸಕ್ಕೆ ದಿನಾಂಕ 04–02–2016 ರೊಳಗಾಗಿ ಕಳುಹಿಸಲು ತಿಳಿಸಿದೆ. ನಂತರ ಬರುವ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವದಿಲ್ಲ.

**ವಿಳಾಸ:–**

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಸಿಬ್ಬಂದಿ ಮತ್ತು ನೇಮಕಾತಿ),**
4ನೇ ಮಹಡಿ, ಅರಣ್ಯ ಭವನ, 18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–560003.

ಬೆಂಗಳೂರು,
ದಿನಾಂಕ: 25–01–2016

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ**
**(ಸಿಬ್ಬಂದಿ ಮತ್ತು ನೇಮಕಾತಿ)**

ಹೈದರಾಬಾದ್-ಕರ್ನಾಟಕ ಅರಣ್ಯ ವೀಕ್ಷಕ ಹುದ್ದೆಯ ಪ್ರಶ್ನೆ ಪತ್ರಿಕೆಯ ಕೀ ಉತ್ತರಗಳು



1. 2014 ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರು ಯಾವ ಭಾಷೆಗೆ ಸೇರಿದವರು ?
(A) ಗುಜರಾತಿ (B) ಕನ್ನಡ (C) ಮರಾಠಿ (D) ತೆಲುಗು

2. "ಹ್ಯಾಮ್ಲೆಟ್, ಜೂಲಿಯಸ್ ", "ಮ್ಯಾಕ್‌ಬೆತ್ " ಪಾತ್ರಗಳನ್ನು ಸೃಷ್ಟಿಸಿದ ಇಂಗ್ಲೀಷ್‌ನ ಖ್ಯಾತ ಸಾಹಿತಿ ಯಾರು ?
(A) ವಿಲಿಯಂ ಶೇಕ್ಸ್‌ಪಿಯರ್ (B) ಚಾರ್ಲ್ಸ್ ಡಿಕೆನ್ಸ್
(C) ಜಾನ್ ಮಿಲ್ಟನ್ (D) ಡಿ. ಹೆಚ್. ಲಾರೆನ್ಸ್

3. ಪ್ರಸ್ತುತ ಕರ್ನಾಟಕ ರಣಜಿ ತಂಡದ ನಾಯಕ ಯಾರು ?
(A) ರಾಬಿನ್ ಉತ್ತಪ್ಪ (B) ವಿನಯ ಕುಮಾರ್
(C) ಶ್ರೀನಾಥ್ (D) ಅನಿಲ್ ಕುಂಬ್ಳೆ

4. "ಬಟರ್ ಪ್ಲೈ", ಎಂಬ ಪದವು ಯಾವ ಕ್ರೀಡೆಗೆ ಸಂಬಂಧಿಸಿದೆ ?
(A) ಖೋ-ಖೋ (B) ಬಾಕ್ಸಿಂಗ್ (C) ಈಜು (D) ಕಬಡ್ಡಿ

5. ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲೆಗಳು ಎಷ್ಟು ?
(A) 25 (B) 26 (C) 29 (D) 30

6. ಕಾವೇರಿ ನದಿಯ ಉಗಮ ಸ್ಥಾನ ಯಾವುದು ?
(A) ತಲಕಾಡು (B) ತಲಕಾವೇರಿ
(C) ಭಾಗಮಂಡಲ (D) ಮೇಲಿನ ಯಾವುದೂ ಅಲ್ಲ

7. ಮೈಸೂರು ರಾಜ್ಯವು "ಕರ್ನಾಟಕ" ಎಂದು ನಾಮಕರಣಗೊಂಡಿದ್ದು ಯಾವಾಗ ?
(A) ನವೆಂಬರ್ 1, 1956 (B) ನವೆಂಬರ್ 1, 1947
(C) ನವೆಂಬರ್ 1, 1973 (D) ನವೆಂಬರ್ 1, 1965

8. "ಪಿಂಕ್ ಸಿಟಿ ನಗರ" ಎಂದು ಭಾರತದ ಯಾವ ನಗರವನ್ನು ಕರೆಯುತ್ತಾರೆ ?
(A) ಜೈಪುರ (B) ಉದಯಪುರ (C) ದೆಹಲಿ (D) ಮುಂಬೈ

9. ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಎಲ್ಲಿದೆ ?
(A) ಖಡಕ್ ವಾಸ್ಲಾ (B) ಡೆಹ್ರಾಡೂನ್ (C) ಚೆನ್ನೈ (D) ಬೆಂಗಳೂರು

10. ಭಾರತವು ಕಳೆದೆರಡು ಬಾರಿ ಅಣುಸ್ಫೋಟವನ್ನು ನಡೆಸಿದಾಗ ಪ್ರಧಾನಮಂತ್ರಿಗಳಾಗಿದ್ದವರು ಯಾರು ?
(A) ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ
(B) ಇಂದಿರಾ ಗಾಂಧಿ ಮತ್ತು ಎ. ಬಿ. ವಾಜಪೇಯಿ
(C) ರಾಜೀವ್ ಗಾಂಧಿ ಮತ್ತು ವಿ. ಪಿ. ಸಿಂಗ್
(D) ಮೇಲಿನ ಯಾವುದೂ ಅಲ್ಲ

11. ಕೆಲವು ಇತಿಹಾಸಕಾರರ ಪ್ರಕಾರ ಸಿಪಾಯಿ ದಂಗೆಗೆ ಕಾರಣವಾದ ಅಂಶಗಳೇನು ?
    (A) ಬ್ರಿಟೀಷರಿಂದ ಆಗುತ್ತಿದ್ದ ಸೈನಿಕರ ಶೋಷಣೆ
    (B) ಬ್ರಿಟೀಷರ ಮೇಲೆ ಸೈನಿಕರಿಗೆ ಅಸೂಯೆ
    (C) ಸೈನಿಕರಿಗೆ ನೀಡಿದ್ದ ಕೋವಿಗಳಿಗೆ ದನದ ಕೊಬ್ಬನ್ನು ಸವರಲಾಗಿತ್ತು ಎಂಬ ಅಂಶ
    (D) ಮೇಲಿನ ಯಾವುದೂ ಅಲ್ಲ

12. ಭಾರತದ ರಾಷ್ಟ್ರೀಯ ಲಾಂಛನದಲ್ಲಿರುವ "ಸತ್ಯಮೇವ ಜಯತೇ" ಎಂಬ ಪದಗಳನ್ನು ಯಾವ ಗ್ರಂಥಗಳಿಂದ ತೆಗೆದುಕೊಳ್ಳಲಾಗಿದೆ ?
    (A) ಭಗವದ್ಗೀತೆ  (B) ಋಗ್ವೇದ
    (C) ಉಪನಿಷತ್‌ಗಳು  (D) ಸಾಮವೇದ

13. ಅಲಹಾಬಾದ್ ಸ್ತಂಭ ಶಾಸನವು ಯಾರ ದಿಗ್ವಿಜಯಗಳ ಕುರಿತಂತೆ ವಿವರಿಸುತ್ತದೆ ?
    (A) ಅಶೋಕ  (B) ಶ್ರೀಗುಪ್ತ
    (C) ಚಂದ್ರಗುಪ್ತ ಮೌರ್ಯ  (D) ಸಮುದ್ರ ಗುಪ್ತ

14. 1975 ರಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿ ಜಾರಿಗೊಂಡಾಗ ರಾಷ್ಟ್ರಪತಿಯಾಗಿದ್ದವರು ಯಾರು ?
    (A) ಡಾ|| ಎಸ್. ರಾಧಾಕೃಷ್ಣನ್  (B) ಜಾಕೀರ್ ಹುಸೇನ್
    (C) ಫಕ್ರುದ್ದಿನ್ ಆಲಿ ಅಹಮದ್  (D) ನೀಲಂ ಸಂಜೀವ ರೆಡ್ಡಿ

15. 2003 ರಲ್ಲಿ ಭಾರತ-ಪಾಕಿಸ್ತಾನದ ಯಾವ 2 ನಗರಗಳ ನಡುವೆ ಬಸ್ ಸಂಚಾರ ಪುನರಾರಂಭವಾಯಿತು ?
    (A) ನವದೆಹಲಿ – ಇಸ್ಲಾಮಾಬಾದ್  (B) ಆಗ್ರಾ- ಲಾಹೋರ್
    (C) ಕೊಲ್ಕತ್ತಾ- ಲಾಹೋರ್  (D) ನವದೆಹಲಿ- ಲಾಹೋರ್

16. ಅಯೋಧ್ಯದಲ್ಲಿ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ್ದು ಯಾವಾಗ ?
    (A) ಡಿಸೆಂಬರ್ 6, 1990  (B) ಡಿಸೆಂಬರ್ 6, 1991
    (C) ಡಿಸೆಂಬರ್ 6, 1992  (D) ಡಿಸೆಂಬರ್ 6, 1993

17. ದ್ವೀಪ ಖಂಡವೆಂದು ಯಾವ ಖಂಡಕ್ಕೆ ಕರೆಯುತ್ತಾರೆ ?
    (A) ಅಮೇರಿಕಾ  (B) ಏಷ್ಯಾ  (C) ಆಫ್ರಿಕಾ  (D) ಆಸ್ಟ್ರೇಲಿಯಾ

18. ಬಾಲಗಂಗಾಧರ್ ತಿಲಕ್‌ರಿಗೆ ಸಂಬಂಧಿಸಿದಂತೆ ಕೆಳಗಿನ ಯಾವುದು ಸರಿ ?
    (A) ಇವರು "ಕೇಸರಿ" ಮತ್ತು "ದಿ ಮರಾಠ" ಎಂಬ ಪತ್ರಿಕೆಗಳನ್ನು ಹೊರಡಿಸಿದರು
    (B) ಸೂರತ್‌ನ ಕಾಂಗ್ರೇಸ್ ಅಧಿವೇಶನದಲ್ಲಿ ಕಾಂಗ್ರೇಸ್ ಎರಡು ಭಾಗಗಳಾದಾಗ ಎಡಪಂಥೀಯ ನೇತೃತ್ವ ವಹಿಸಿದ್ದರು
    (C) "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಇದು ತಿಲಕ್‌ರ ಘೋಷಣೆಯಾಗಿತ್ತು
    (D) ಮೇಲಿನ ಎಲ್ಲವೂ ಸರಿ

19. ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾವುದು ?
(A) ರಾಯಚೂರು (B) ಕೊಪ್ಪಳ (C) ಹಂಪಿ (D) ಬಳ್ಳಾರಿ

20. ಕನ್ನಡದ ವರ್ಡ್ಸ್‌ವರ್ಥ್ ಯಾರು ?
(A) ರಾಘವಾಂಕ (B) ದ. ರಾ. ಬೇಂದ್ರೆ (C) ಕುವೆಂಪು (D) ಕಾರಿಯಪ್ಪ

21. ''ಅಂಚೆ ಮತ್ತು ತಂತಿ'' ವ್ಯವಸ್ಥೆಯನ್ನು ಯಾವಾಗ ಜಾರಿಗೆ ತರಲಾಯಿತು ?
(A) 1853 (B) 1863 (C) 1857 (D) 1852

22. ಚಂದ್ರಗ್ರಹಣ ಹೇಗೆ ಉಂಟಾಗುತ್ತದೆ ?
(A) ಭೂಮಿ ಮತ್ತು ಸೂರ್ಯನ ಮಧ್ಯೆ ಚಂದ್ರ ಬಂದಾಗ
(B) ಚಂದ್ರ ಮತ್ತು ಭೂಮಿಯ ಮಧ್ಯೆ ಸೂರ್ಯ ಬಂದಾಗ
(C) ಭೂಮಿ ಮತ್ತು ಚಂದ್ರನ ಮಧ್ಯೆ ಮಂಗಳ ಬಂದಾಗ
(D) ಚಂದ್ರ ಮತ್ತು ಸೂರ್ಯನ ಮಧ್ಯೆ ಭೂಮಿ ಬಂದಾಗ

23. ಗೋಬಿ ಮರುಭೂಮಿ ಎಲ್ಲಿದೆ ?
(A) ಉತ್ತರ ಅಮೇರಿಕಾ (B) ಚಿಲಿ (C) ಚೀನಾ (D) ಆಸ್ಟ್ರೇಲಿಯಾ

24. ಈ ಕೆಳಗಿನ ಪಟ್ಟಿ 1 ಮತ್ತು 2ನ್ನು ಹೊಂದಿಸಿ ಸರಿಯಾದ ಉತ್ತರವನ್ನು ಪಟ್ಟಿಗಳ ಕೆಳಗೆ ನೀಡಿರುವ ಸಂಕೇತಗಳಿಂದ ಆರಿಸಿರಿ.

| **ಪಟ್ಟಿ 1 (ಜಲಾಶಯ)** | **ಪಟ್ಟಿ 2 (ರಾಜ್ಯ)** |
|---|---|
| (a) ಹಿರಾಕುಡ್ | (1) ಛತ್ತೀಸ್‌ಗಡ್ |
| (b) ಮೆಟ್ಟೂರು | (2) ಒರಿಸ್ಸಾ |
| (c) ಮಹಾನದಿ | (3) ಕರ್ನಾಟಕ |
| (d) ನಾರಾಯಣಪುರ | (4) ತಮಿಳುನಾಡು |

(A)

| a | b | c | d |
|---|---|---|---|
| 3 | 2 | 4 | 1 |

(B)

| a | b | c | d |
|---|---|---|---|
| 2 | 4 | 1 | 3 |

(C)

| a | b | c | d |
|---|---|---|---|
| 1 | 3 | 2 | 4 |

(D)

| a | b | c | d |
|---|---|---|---|
| 4 | 1 | 3 | 2 |

25. 2011ರ ಜನಗಣತಿ ವರದಿಯ ಪ್ರಕಾರ ಭಾರತದಲ್ಲಿ ಅತೀ ಕಡಿಮೆ ಲಿಂಗಪ್ರಮಾಣವನ್ನು ಹೊಂದಿರುವ ರಾಜ್ಯ ಯಾವುದು ?
(A) ಹರಿಯಾಣ (B) ಪಂಜಾಬ್ (C) ಉತ್ತರ ಪ್ರದೇಶ (D) ಸಿಕ್ಕಿಂ

26. MGNAREGA ವು ಯಾವಾಗ ಜಾರಿಗೆ ಬಂದಿತು ?

(A) 2005 (B) 2007 (C) 2009 (D) 2011

27. ಲಕ್ಷ್ಮಿ ನಿವಾಸ್ ಮಿತ್ತಲ್‌ರವರು ಯಾವ ಕ್ಷೇತ್ರದಲ್ಲಿ ಅತ್ಯಂತ ಹೆಸರುವಾಸಿಯಾಗಿದ್ದಾರೆ ?

(A) ಉಕ್ಕು (B) ಪೆಟ್ರೋಲಿಯಂ (C) ಸಿಮೆಂಟ್ (D) ಬಟ್ಟೆ ಗಿರಣಿ

28. ''ಬಿಳಿಕ್ರಾಂತಿ''ಯು ಯಾವುದಕ್ಕೆ ಸಂಬಂಧಿಸಿದೆ ?

(A) ಮೀನುಗಾರಿಕೆ (B) ಸಸ್ಯ ಸಂರಕ್ಷಣೆ (C) ಹೈನುಗಾರಿಕೆ (D) ನೀರಾವರಿ

29. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

(1) ಭಾರತದ ರಾಷ್ಟ್ರಪತಿಯಾಗಿ ಚುನಾಯಿತನಾಗಲು , ಯಾವುದೇ ವ್ಯಕ್ತಿಗೆ ಕನಿಷ್ಠ 45 ವರ್ಷ ವಯಸ್ಸಾಗಿರಬೇಕು.

(2) ಭಾರತದ ರಾಷ್ಟ್ರಪತಿಯವರನ್ನು ರಾಜ್ಯಗಳ ವಿಧಾನ ಪರಿಷತ್ತಿನ ಸದಸ್ಯರು ಮಾತ್ರ ಚುನಾಯಿಸುತ್ತಾರೆ.

ಮೇಲಿನ ಯಾವ ಹೇಳಿಕೆ / ಗಳು ಸರಿ ?

(A) 1 ಮಾತ್ರ (B) 2 ಮಾತ್ರ (C) 1 ಮತ್ತು 2 (D) ಯಾವುದೂ ಅಲ್ಲ

30. ಗಣಕಯಂತ್ರದಲ್ಲಿ ಕಾಣುವ ಮಾಹಿತಿಯನ್ನು ಯಥಾವತ್ತಾಗಿ ಕಾಗದದ ಮೇಲೆ ಮುದ್ರಿಸಲು ಯಾವ ಉಪಕರಣವನ್ನು ಬಳಸಲಾಗುತ್ತದೆ ?

(A) ಜಾಯ್ ಸ್ಟಿಕ್ (B) ಪಂಚ್‌ಡ್ ಕಾರ್ಡ್

(C) ಪ್ರಿಂಟರ್ (D) ಮೇಲಿನ ಯಾವುದೂ ಅಲ್ಲ

31. ವೆಬ್‌ಪುಟಗಳಲ್ಲಿ ____________ ಗಳನ್ನು ಸೇರಿಸಬಹುದು.

(A) ಪಠ್ಯ (B) ಚಿತ್ರ

(C) ವೀಡಿಯೋ (D) ಮೇಲಿನ ಎಲ್ಲವೂ

32. ಇವುಗಳಲ್ಲಿ ಯಾವುದನ್ನು ಧಾನ್ಯದ ಕಾಳು ಎಂದು ಪರಿಗಣಿಸುವುದಿಲ್ಲ ?

(A) ಅಕ್ಕಿ (B) ಜೋಳ (C) ಸಬ್ಬಕ್ಕಿ (D) ರಾಗಿ

33. ಕರ್ನಾಟಕದ ಪ್ರಸ್ತುತ ವಿತ್ತಮಂತ್ರಿ ಯಾರು ?

(A) ದೇಶಪಾಂಡೆ (B) ಸಿದ್ಧರಾಮಯ್ಯ (C) ಕೆ. ಜೆ. ಜಾರ್ಜ್ (D) ರಾಮಲಿಂಗ ರೆಡ್ಡಿ

34. ಸರಿ ಉತ್ತರ ತಿಳಿಸಿ : $2\frac{1}{7} + 16 - 3 \times 5$

(A) 3 (B) 4 (C) 68 (D) 80

35. ಯಾವ ಆವರಣ ಚಿಹ್ನೆಯನ್ನು ಬಳಸಿದ ಉತ್ತರ ಈ ಹೇಳಿಕೆಯನ್ನು ಸಮರ್ಥಿಸುತ್ತದೆ ?

$4 \times 15 - 11 + 8/2 = 20$.


(A) $4 \times (15 - 11) + 8/2$ (B) $(4 \times 15) - 11 + 8/2$

(C) $4 \times 15 - (11 + 8)/2$ (D) $4 \times (15 - 11) + (8/2)$

36. $1\frac{3}{7} \times \frac{5}{39} \times 10\frac{2}{5} \times 2\frac{1}{10}$ ಹಾಗಾದರೆ ಇದರ ಫಲಿತಾಂಶವು ಯಾವುದು ?

(A) 4 (B) 5 (C) 1 (D) 0

37. ಈ ಚಿತ್ರದ ಒಳಗಿರುವ ಕೋನಗಳ ಸಂಖ್ಯೆ ಎಷ್ಟು ?



(A) 10 (B) 11 (C) 12 (D) 13

38. ಒಂದು ಚೌಕದ ವಿಸ್ತೀರ್ಣ 144 ಚ.ಮೀ. ಇದರ ಸುತ್ತಳತೆಯು ಎಷ್ಟು ?

(A) 12 ಮೀ. (B) 24 ಮೀ. (C) 36 ಮೀ. (D) 48 ಮೀ.

39. ಒಂದು ದ್ರವ ಅನಿಲ ವಸ್ತು 3492 $cm^3$ ಸಾಮರ್ಥ್ಯ ಹೊಂದಿದ್ದರೆ, ಅದು ಯಾವುದಕ್ಕೆ ಸಮಾನವಾಗಿರುತ್ತದೆ ?

(A) 349.2 ಲೀಟರ್ (B) 34.92 ಲೀಟರ್ (C) 3.492 ಲೀಟರ್ (D) 3492 ಲೀಟರ್

40. ಇವುಗಳಲ್ಲಿ ಯಾವುದು ಸಮಾನಾಂತರ ರೇಖೆ ಹೊಂದಿಲ್ಲ ?

(A) ಚೌಕ (B) ಆಯತ

(C) ವಿಷಮ ಸಮಾನಾಂತರ ಚತುರ್ಭುಜ (D) ಸಮಾನಾಂತರ ಚತುರ್ಭುಜ

41. $\frac{1}{8}$ ರ ಶೇಕಡಾವಾರು ಭಾವಸಂಕೇತ ಯಾವುದು ?

(A) 8% (B) $12 \times \frac{1}{2}$% (C) $8 \times \frac{1}{2}$% (D) 12%

42. 212° ತಾಪಮಾನವನ್ನು ಸೆಲ್ಸಿಯಸ್‌ಗೆ ಪರಿವರ್ತಿಸಿದಾಗ ಎಷ್ಟಾಗುವುದು ?

(A) 140° (B) 160° (C) 100° (D) 190°

43. ಒಂದು ನೆಕ್ಲೆಸ್ 5 ಬಣ್ಣದ ದಾರ ಹೊಂದಿದ್ದು ನಸುಗೆಂಪು, ಹಸಿರು ಮತ್ತು ಬಿಳಿ ಹರಳುಗಳನ್ನು ಹೊಂದಿದೆ. ಅದರ ಸಣ್ಣ ದಾರವು 55 ಹರಳುಗಳನ್ನು ಹಾಗೂ ಅತಿ ದೊಡ್ಡ ದಾರವು ಸಣ್ಣದಾರದ ಎರಡರಷ್ಟು ಹರಳುಗಳನ್ನು ಹೊಂದಿದೆ. ಉಳಿದ ಮೂರು ದಾರಗಳು ಕ್ರಮವಾಗಿ 10, 20 ಮತ್ತು 30 ಹೆಚ್ಚಿನ ಹರಳುಗಳನ್ನು ಹೊಂದಿದೆ. ಹಾಗಾದರೆ ನೆಕ್ಲೆಸ್‌ನಲ್ಲಿರುವ ಒಟ್ಟು ಹರಳುಗಳ ಸಂಖ್ಯೆ ಎಷ್ಟು ?

(A) 350 (B) 375 (C) 385 (D) 390

44. ಇವು ಒಂದಕ್ಕೊಂದು ಪೂರಕ ಕೋನಗಳು

(A) 30° ಮತ್ತು 40° (B) 60° ಮತ್ತು 30° (C) 40° ಮತ್ತು 40° (D) 50° ಮತ್ತು 30°

45. 45, ಇದರ ರೋಮನ್ ಸಂಖ್ಯಾರೂಪ ಯಾವುದು ?

(A) LVX (B) VLX (C) XLV (D) ಯಾವುದೂ ಅಲ್ಲ

46. $\frac{1}{8}$ ರ ದಶಮಾಂಶ ರೂಪ ಯಾವುದು ?

(A) 0.215 (B) 0.125 (C) 0.512 (D) 0.515

47. $17.09 \times 1000 =$

(A) 17009 (B) 17900 (C) 17090 (D) 17109

48. 1003.84 ಕ್ಕೆ ಯಾವುದನ್ನು ಸೇರಿಸಿದರೆ 1073.29 ಆಗುತ್ತದೆ ?

(A) 65.94 (B) 69.54 (C) 64.95 (D) 69.45

49. ವೃತ್ತದ ಸುತ್ತಳತೆಯು 52 ಆದರೆ ಅದರ ತ್ರಿಜ್ಯ ಎಷ್ಟು ?

(A) 8.72 (B) 7.28 (C) 8.27 (D) 7.82

50. ಒಂದು ಚೌಕಾಕಾರದ ತೋಟವು 220 ಮೀಟರ್ ಹೊಂದಿದ್ದರೆ ಅದರ ಸುತ್ತಳತೆ ಎಷ್ಟು ?

(A) 5032 (B) 3052 (C) 3025 (D) 5302

---